# ಆದು ನೀನೇ!



ಒಂದಾನೊಂದು ಕಾಲದಲ್ಲಿ ಚೇದಿ ದೇಶವನ್ನು ಸಹಜ ಎಂಬ ರಾಜನು ಆಳುತ್ತಿದ್ದ. ಅವನು ಒಂದು ದಿನ ತನ್ನ ಅರಮನೆಯವರ ಮನರಂಜನೆಗೋಸ್ಕರ ಮಕ್ಕಳಿಂದ ಒಂದು ನಾಟಕವನ್ನು ಮಾಡಿಸಲು ಆದೇಶಿಸಿದ. ಆ ನಾಟಕವು ನೆರೆಯ ಕಾಶಿದೇಶದ ಬಗ್ಗೆ ಆಗಿತ್ತು. ನಾಟಕದಲ್ಲಿ ಕಾಶಿ ರಾಜಕುಮಾರಿಯ ಪಾತ್ರವನ್ನು ಮಾಡಲು ಚಂದದ ಹೆಣ್ಣುಮಗಳು ಸಿಗಲಿಲ್ಲ. ಹಾಗಾಗಿ ಮಹಾರಾಣಿಯು ತನ್ನ ಮಗ ಐದು ವರ್ಷದ ಬಾಲಕ ಸುಹಾಸನಿಗೆ ಆ ಪಾತ್ರವನ್ನು ಮಾಡಲು ಹುರಿದುಂಬಿಸಿದಳು. ಬಾಲಕ ಸುಹಾಸನಿಗೆ ನಾಟಕದಂದು ಕಾಶಿ ರಾಜಕುಮಾರಿಯಂತೆ ವೇಷಭೂಷಣ ತೊಡಿಸಿ ಶೃಂಗಾರ ಮಾಡಿಸಿ ನಾಟಕವನ್ನು ಆಡಿಸಿದರು. ಆ ನಾಟಕವನ್ನು ರಾಜ, ಮಂತ್ರಿ, ಆಸ್ಥಾನದ ಗುರುಗಳು, ರಾಣಿಯರು, ಹೀಗೆ ಅರಮನೆಯಲ್ಲಿದ್ದವರು ನೋಡಿ ಆನಂದಿಸಿದರು. ಅತ್ಯಂತ ಮೋಹಕವಾಗಿ ರಾಜಕುಮಾರಿಯ ಪಾತ್ರವನ್ನು ಮಾಡಿದ ರಾಜಕುಮಾರ ಸುಹಾಸನನ್ನು ಎಲ್ಲರೂ ಅಭಿನಂದಿಸಿದರು. ಆಗ ಮಹಾರಾಣಿಗೆ ಒಂದು ಯೋಚನೆ ಹೊಳೆಯಿತು. ಆಕೆ ವರ್ಣಚಿತ್ರಕಾರನೊಬ್ಬನನ್ನು ಕರೆದು ರಾಜಕುಮಾರಿಯ ಪಾತ್ರವನ್ನು ಮಾಡಿದ ಸುಹಾಸನ ವರ್ಣಚಿತ್ರವೊಂದನ್ನು ಬರೆಯಲು ಆದೇಶಿಸಿದಳು. ಅದರಂತೆ ಆ ಚಿತ್ರಕಾರ ಅತ್ಯಂತ ಶ್ರದ್ಧೆಯಿಂದ ಬಹುಸುಂದರವಾದ ರಾಜಕುಮಾರಿಯ ವರ್ಣಚಿತ್ರವನ್ನು ಬರೆದು ಅದಕ್ಕೆ ಜತನದಲ್ಲಿ ವಸ್ತ್ರದಿಂದ ಹೊದಿಕೆ ಮಾಡಿ ರಾಣಿವಾಸಕ್ಕೆ ಕಳುಹಿಸಿದ. ಆದರೆ ಅದನ್ನು ಪಡೆದ ದಾಸಿಯರು ಹೊದಿಕೆಯನ್ನು ತೆಗೆದು ನೋಡದೆ ಅದು ಮೂಲೆ ಸೇರಿತು.

ಅದಾಗಿ ಕೆಲವು ಸಮಯಗಳ ನಂತರ ರಾಜಕುಮಾರ ಸುಹಾಸನನ್ನು ಗುರುಕುಲಕ್ಕೆ ವಿದ್ಯಾಭ್ಯಾಸಕ್ಕೆಂದು ಕಳುಹಿಸಿದರು. ಸುಮಾರು ಹನ್ನೆರಡು ವರ್ಷಗಳ ಕಾಲ ರಾಜಕುಮಾರ ಸುಹಾಸನು ಬೆಳೆದು ಕಲಿತು ಸಕಲ ವಿದ್ಯಾಪಾರಂಗತನಾಗಿ ಅರಮನೆಗೆ ಮರಳಿದ. ಹೀಗಿರುತ್ತಾ ಒಂದು ದಿವಸ ಅವನು ಅರಮನೆಯ ಒಳಗೆಲ್ಲ ಓಡಾಡುತ್ತ ಅಲ್ಲಿದ್ದ ವಸ್ತುಗಳನ್ನು ಪರಿಶೀಲಿಸುತ್ತಾ ಬರುತ್ತಿರಬೇಕಾದರೆ ರಾಣಿವಾಸದ ಬಳಿ ಹೊದಿಕೆಯೊಳಗಿದ್ದ ವರ್ಣಚಿತ್ರವು ಅವನ ಕಣ್ಣಿಗೆ ಬಿತ್ತು. ಆ ಚಿತ್ರದ ಕೆಳಗೆ ‘ಕಾಶಿಯ ರಾಜಕುಮಾರಿ’ ಎಂದು ಬರೆದಿತ್ತು. ಸುಹಾಸನು ಆ ಚಿತ್ರವನ್ನು ತದೇಕ ದೃಷ್ಟಿಯಿಂದ ನೋಡಿದ. ನೋಡುತ್ತಾ ಆಕೆಯ ಸೌಂದರ್ಯಕ್ಕೆ ಮಾರುಹೋದ. ಸುಮಾರು ವರ್ಷಗಳ ಹಿಂದೆ ಬರೆದ ಚಿತ್ರವದಾಗಿತ್ತು. ಹಾಗಾದರೆ ಆಕೆ ಈಗ ತನ್ನಷ್ಟೇ ಪ್ರಾಯವನ್ನು ಹೊಂದಿರುತ್ತಾಳೆ ಎಂದುಕೊಂಡ. ಮಾತ್ರವಲ್ಲ, ಆಕೆ ಈಗ ಇನ್ನಷ್ಟು ಸೌಂದರ್ಯವತಿಯಾಗಿರಬಹುದು ಎಂದು ಊಹಿಸಿಕೊಂಡ. ಅವನು ಆ ಚಿತ್ರಪಟವನ್ನು ಯಾರಿಗೂ ತೋರಿಸದೆ ತನ್ನ ಕೋಣೆಯಲ್ಲಿ ತಂದಿಟ್ಟ. ಹೊರಗೆಲ್ಲ ಓಡಾಡಿಕೊಂಡು ಸದಾ ಚಟುವಟಿಕೆಯಿಂದ ಇರುತ್ತಿದ್ದ ಸುಹಾಸನು ಈಗ ಸದಾಕಾಲ ತನ್ನ ಕೋಣೆಯಲ್ಲಿ ಆ ಚಿತ್ರವನ್ನು ನೋಡುತ್ತಾ ಅದರೊಂದಿಗೆ ಮಾತನಾಡುತ್ತಾ ಮೈಮರೆತುಬಿಟ್ಟ. ತಾನು ಕಾಶಿಗೆ ಹೋಗಬೇಕು, ಆ ರಾಜಕುಮಾರಿಯನ್ನು ಕಾಣಬೇಕು, ಎಂಬ ಯೋಚನೆ ಬಂದರೂ ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಅದು ಸಾಧ್ಯವಾಗಿರಲಿಲ್ಲ. ಹೀಗಾಗಿ ಚಿಂತಾಕ್ರಾಂತನಾದ ರಾಜಕುಮಾರ ಸುಹಾಸನು ಅನ್ನಾಹಾರವನ್ನು ತೊರೆದು ಕೊರಗತೊಡಗಿದ.

ರಾಜಕುಮಾರನ ಅವಸ್ಥೆಯು ಅರಮನೆಯಲ್ಲಿದ್ದವರಿಗೆ ತಿಳಿಯಿತು. ರಾಜ ಸಹಜನು ತನ್ನ ಮಂತ್ರಿಯನ್ನು ಕರೆದು ಮಗನ ಬಗ್ಗೆ ವಿಚಾರಿಸಲು ಹೇಳಿದ. ಮಂತ್ರಿಯು ಸುಹಾಸನ ಆಪ್ತಸಖನನ್ನು ಕರೆದು ವಿಷಯವೇನೆಂದು ಕೇಳಿದ. ಆಗ ಸುಹಾಸನ ಸ್ನೇಹಿತ ರಾಜಕುಮಾರನು ಕಾಶಿಯ ರಾಜಕುಮಾರಿಯ ವರ್ಣಚಿತ್ರವನ್ನು ನೋಡಿ ಅದರಲ್ಲಿ ಮೈಮರೆತಿರುವ ವಿಷಯವನ್ನು ಅರುಹಿದ. ಸೂಕ್ಷ್ಮಮತಿಯಾದ ಮಂತ್ರಿಗೆ ವಿಷಯದ ಮೂಲವೇನೆಂದು ಗೊತ್ತಾಯಿತು. ಆತನು ತನ್ನ ಜೊತೆ ಅಂದು ನಾಟಕ ನೋಡಿದ್ದ ಆಸ್ಥಾನದ ಹಿರಿಯ ಗುರುಗಳನ್ನು ಕರೆದುಕೊಂಡು ಸುಹಾಸನಿರುವಲ್ಲಿಗೆ ಹೋದ. ಅಲ್ಲಿ ಅವನು ಕಾಶಿರಾಜಕುಮಾರಿಯ ವರ್ಣಚಿತ್ರವನ್ನು ನೋಡುತ್ತಾ ನಿಂತಿದ್ದ.

ಅದನ್ನು ಕಾಣುತ್ತಲೇ ಗುರುಗಳು ನಕ್ಕು ಜೋರಾಗಿ ‘ತತ್ತ್ವಮಸಿ!’ ಎಂದರು. ಸುಹಾಸನಿಗೆ ಅವರ ಮಾತು ಅರ್ಥವಾಗದೆ ಅದೇನೆಂದು ಮಂತ್ರಿಯಲ್ಲಿ ಕೇಳಿದ. ಆಗ ಮಂತ್ರಿಯೂ ನಗುತ್ತಾ ‘ಅದು ನೀನು ಆಗಿದ್ದಿಯಾ!’ ಎಂದರು. ರಾಜಕುಮಾರನಿಗೆ ಈಗಲೂ ಅರ್ಥವಾಗದೆ ಪಿಳಿಪಿಳಿ ಎಂದು ಕಣ್ಣುಮಿಟುಕಿಸಿದ. ಆಗ ಮಂತ್ರಿಯು ಆ ಚಿತ್ರದ ಹಿನ್ನೆಲೆಯನ್ನು ವಿವರಿಸುತ್ತಾ ರಾಜಕುಮಾರ, ಈ ವರ್ಣಚಿತ್ರದಲ್ಲಿರುವುದು ಬೇರೆ ಯಾರೂ ಅಲ್ಲ, ಅದು ನೀವೇ! ನೀವು ಐದು ವರ್ಷವಿದ್ದಾಗ ನಾಟಕವೊಂದರಲ್ಲಿ ತಾವು ಮಾಡಿದ ಕಾಶಿ ರಾಜಕುಮಾರಿಯ ಸುಂದರ ಪಾತ್ರವನ್ನು ಕಲಾಕಾರನೊಬ್ಬ ಹಾಗೆಯೇ ಚಂದವಾಗಿ ಚಿತ್ರ ಬಿಡಿಸಿದ. ಆದರೆ ನಿಮಗೆ ಬಾಲ್ಯದ ಆ ಘಟನೆ ಮರೆತುಹೋಗಿದೆ. ಈಗ ನೀವು ನಿಮ್ಮ ಚಿತ್ರಪಟವನ್ನೇ ನೋಡುತ್ತಾ ಮೋಹಗೊಂಡಿರಿ, ಎಂದು ವಿವರಿಸಿದರು. ಅದನ್ನು ಕೇಳಿ ನಾಚಿ ನೀರಾದ ರಾಜಕುಮಾರ ಸುಹಾಸನು ಆ ಸುಂದರ ವರ್ಣಚಿತ್ರವನ್ನು ಬಿಡಿಸಿದ ಚಿತ್ರಕಾರನನ್ನು ಹುಡುಕಿ ಕರೆತಂದು ಸೂಕ್ತ ಬಹುಮಾನವನ್ನಿತ್ತು ಸತ್ಕರಿಸಿದ.

■ ಸಂಗ್ರಹ: **ರಮೇಶ್ ಶೆಟ್ಟಿಗಾರ್ ಮಂಜೇಶ್ವರ**